ತಾರೀಖು 28ನೇ ಫಿಬ್ರವರೀ 1884.

ಇದರಿಂದ ತಿಳಿಯಪಡಿಸುವದೇನಂದರೆ, ಈ ಕೆಳಗೆ ಬರುವ ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲಿ ಬೇವಾರಸಾಗಿ ಇರತಕ್ಕ ಮುಂದೆ ವಿವರಿಸುವ ದಸ್ತಾವೇಜುಗಳನ್ನು ಹಾಜರ್ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯುವದಕ್ಕೆ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೆ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ವಂದು ತಿಂಗಳ ವಳಗಾಗಿ ಹಾಜರಾಗಿ ವಾಪಸ್ ತೆಗದುಕೊಳ್ಳದೆ ತಪ್ಪಿದರೆ ರಿಜಿಸ್ಟ್ರೇಷನ್ ನಿಬಂಧನೆ ಮೇರೆ ಅವು ನಾಶ ಪಡಿಸಲ್ಪಡುವವು.

ಸಬ್ ರಿಜಿಸ್ಟ್ರೇ ಆಫೀಸ್.	ದಸ್ತಾವೇಜು ನಂಬರ್.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಿಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ರಿಜಿಸ್ಟ್ರಿ ಮಾಡಿದ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ಅತ್ತಿಕುಪ್ಪೆ.	1ನೇ ಬುಕ್ಕು 25 / 1878—79	ನೇರಲಕೆರೇ ಪಟೇಲ್ ಬೋರೇಗೌಡ	ನುಗ್ಗಿಹಳ್ಳೀಲಿರುವ ಸುಬೇದಾರ್ ಚನ್ನಪ್ಪಯ್ಯಂಗಾರ್ ಆಸ್ಥಾಯಗಜೆಕ್ಯೂಟರ್ ನು॥ ತಿರುವಾಲಾಚಾರ್	20—5—78	20—5—78	ಗಂಜೀಗೆರೆ ಗ್ರಾಮದಲ್ಲಿ ಯಿರುವ ನಂಬರ್ 101ನೇ ತೋಟ 6—19ನೇ ಹೊಲಗಳು ಸಹಾ 230 ರೂಪಾಯಿಗೆ ಆಧಾರ.
	139 / 1880—81	ಕೊರಟಿಗೆರೆ ಗೋವಿಂದರಾಯ	ಬಾರತೀಪುರದ ಶ್ರೀನಿವಾಸಗಿರಿ ಗೋಸಾಯಿ ಬಾವಾಜಿ	3—3—81	4—3—81	ಕೊರಟಿಗೆರೆ ಗ್ರಾಮದ ಕೆರೆ ಕೆಳಗೆ ನಂಬರ್ 34—330ನೇ ಗದ್ದೆ 220 ರೂಪಾಯಿಗೆ ಕ್ರಯ.
ಬಿಂಡಿಗ್ನವಿ.	2ನೇ ಬುಕ್ಕು 1 / 1878—79	ಹಿರೀಸಾವೆ ವೆಂಕಟನರಸಯ್ಯ 1, ಮನ್ನಾರಯ್ಯ 1,	ಹಿರೀಸಾವೆ ಅಗಸಾಲೆ ಬಸವಾಚಾರಿ 1 ಬುಕ್ಕಾ ಮೇಸ್ತ್ರಿ 1	24—2—79	25—10—78	ಹಿರೀಸಾವೆ ಕೆರೇಹಿಂದೆ ಸಬ್ಬನಹಳ್ಳಿ ಹಂತದಲ್ಲಿ 18 ರೂಪಾಯಿ ಕಂದಾಯವುಳ್ಳ ತೋಟವನ್ನು 150 ರೂಪಾಯಿಗೆ ಭೋಗ್ಯ ಮಾಡಿರುವದಾಗಿ.
	81 / 1881—82	ಹುಣಗನಹಳ್ಳಿ ದೊಡ್ಡೀಗೌಡ	ಬಟ್ಟಹಳ್ಳಿ ದಾಖಲೇ ಪುರದ ಕೊಪ್ಪಲ್ ಅಮ್ಮಿ ಜೆಂಗಿಗೌಡ	71—9—81	22—11—81	ಬಟ್ಟಹಳ್ಳೀ ಗ್ರಾಮದಲ್ಲಿ 1—3—11 ಕಂದಾಯವುಳ್ಳ 4 ತಾಕು ಜಮೀನುಗಳನ್ನು 8 ರೂಪಾಯಿಗೆ ಕ್ರಯಕ್ಕೆ ಕೊಟ್ಟಿರುವದಾಗಿ.

ವಿ. ಪಿ. ಮಾಧವರಾವ್,
ರಿಜಿಸ್ಟ್ರಾರ್.

ಹಾಸನ ಸಬ್ ಡಿವೀಜ್ಯನ್ ಆಫೀಸ್.

ತಾರೀಖು 29ನೇ ಫಿಬ್ರವರೀ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದೀವಾನ್ ಸಾಹೆಬರವರ ಹುಕ್ಕುಂ ಬವೋಜೇಬ್, ಹಾಸನ ಸಬ್ ಡಿವೀಜ್ಯನ್ ಪೈಕೀ ಮಂಜರಾಬಾದ್ ತಾಲ್ಲೂಕಿನಲ್ಲಿ ಯಿರುವ ಮಾರ್ನಹಳ್ಳಿ ಘಾಟೀಯಲ್ಲಿ ಟೋಲ್ ಗೇಟ್ ಯೆಂಬ ಸುಂಕದಕಟ್ಟೆ ವಳಗೆ ಸ್ರ 1884ನೇ ಇಸವಿ ಏಪ್ರೆಲ್ ಮಾಹೆ 1ನೇ ಮರ್ಕುಂ ಲಾಗಾಯತು, 1885ನೇ ಇಸವಿ ಮಾರ್ಚೀ 31ರ ವರಿಗೆ ಸುಂಕ ವಸೂಲ್ ಮಾಡುವೆ ಸ್ವತಂತ್ರವು, ಸ್ರ 1884ನೇ ಇಸವಿ ಮಾರ್ಚೀ ತಾರೀಖು 26ರಲ್ಲು ಕಸಬಾ ಸಕ್ಕೇಶಪುರದ ಮೊಕ್ಕಾಂ ತಾಲ್ಲೂಕು ಕಚೇರಿಯೊಳಗೆ ಬಹಿರಂಗವಾವ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

2, ವಸೂಲಿ ಹಕ್ಕನ್ನು ಕೊಂಡುಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗ್ಗತ್ತಾಗಿ ಯಿರುವ ಷೆಡ್ಯೂಲ್‌ನಲ್ಲಿ ನಮೂದಾಗಿ ಯಿರುವ ದರಗಳ ಮೇರಿಗೇನೇ ಟೋಲ್ ವಸೂಲ್ ಮಾಡಬೇಕು. ಮತ್ತು ಸ್ ೧೮೭೬ನೇ ಇಸವಿ ನವಂಬರ್ 4ನೇ ಮತ್ತು ಂ 274ನೇ ನಂಬರ್ ವುಳ್ಳ ಲೇಟ್ ಚೀಫ್ ಕಮ್ಮಿಷನರ ಸಾಹೆಬರವರ ನೋಟಿಫಿಕೇಷ್ನಲ್ಲಿ ಫಾಯಿಷ್ ಆಗಿ ಇರುವ ರೂಲ್ಸ್ ಪ್ರಕಾರ ನಡದುಕೊಳ್ಳಬೇಕು.

3. ಚಿಕ್ಕ ದರಖಾಸ್ತನ್ನಾಗಲಿ, ಯಾವ ದರಖಾಸ್ತನ್ನಾಗಲಿ, ಅಂಗೀಕರಿಸುವಕ್ಕೆ ಯಾ ತಿರಸ್ಕರಿಸುವದಕ್ಕೆ ಹಾಸನ ಸಬ್ ಡಿವೀರ್ಜ ಆಫೀಸರವರು ಅಧಿಕಾರ ವುಳ್ಳವರಾಗಿರುತ್ತಾರೆ.

4. ಯಾವ ದರಖಾಸ್ತು ಅಂಗೀಕರಿಸಲ್ಪಡುತದೆಯೋ ಅವನು ಕೂಡ್ಲಿ ದರಖಾಸ್ತು ಮೊಬಲಗಿನಲ್ಲಿ ನಾಲ್ಕರಲ್ಲಿ ವಂದಂಶ ಮೊಬಲಗನ್ನು ಅಡ್ವಾನಸಾಗಿ ತೇವಣಿ ಇಟ್ಟು ಬಾಕೀ ಮೊಬಲಗನ್ನು 1884ನೇ ಇಸವಿ ಏಪ್ರೆಲ್ 20ರ ಲಾಗಾಯತು ಸಮನಾದ ಆರು ಖಿಸ್ತುಗಳಾಗಿ ಪ್ರತಿ ತಿಂಗಳು 20ನೇ ತಾರೀಖಿಗೆ ಪಾವತೀ ಮಾಡಬೇಕು. ದರಖಾಸ್ತುದಾರನು ಪ್ರತಿ ಮಾಹೆವಾರೀ ಖಿಸ್ತು ಮೊಬಲಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಲಾಯಖಾದ ವೆಬ್ಬನನ್ನು ಜಾಮೀರ್ ಕೊಡಬೇಕು.

5. ತೇವಣಿ ಯಿಡದೆ ಯಿದ್ದರೆ ಅಥವಾ ಜಾಮೀರ್ ಕೊಡದೆ ಇದ್ದರೆ ದರಖಾಸ್ತುದಾರನಿಗೆ ಲುಕ್ಸಾನ್ ಕರವಾಗಿ ಕಂಟ್ರಾಕ್ಟು ಎರಡನೇ ಹರಾಜು ಮಾಡಲ್ಪಡುವದು, ಖಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಗೆ ಬಾಕೀ ಆದ ಮೊಬಲಗಿಗೆ ಪಾವತೀ ತಾರೀಖಿನ ವರಿಗೆ ತಿಂಗಳು 1ಕ್ಕೆ ರೂಪಾಯಿ 1ಕ್ಕೆ ವರದು ಕಾಸಿನಂತೆ ಬಡ್ಡೀ ವಸೂಲ್ ಮಾಡಲ್ಪಡುವದು, ಮತ್ತು ಸಬ್ ಡಿವೀರ್ಜ ಆಫೀಸರವರು ತಮಿಗೆ ಯುಕ್ತ ತೋರುವ ಪ್ರಕಾರ ಅಥವಾ ಜಾಮೀರ್‌ದಾರನ ಅಪೇಕ್ಷೆ ಪ್ರಕಾರ ಕಂಟ್ರಾಕ್ಟು ಯರಡನೆ ಹರಾಜು ಮಾಡಲ್ಪಡುವದಕ್ಕೆ ಗುರಿಯಾಗತಕ್ಕದ್ದು. ಅದರಿಂದ ಯೀನಾದರು ನಷ್ಟ ಸಂಭವಿಸಿದರೆ ಅದು ಕಂಟ್ರಾಕ್ಟುದಾರನಿಂದ ಅಥವಾ ಜಾಮೀರ್‌ದಾರನಿಂದ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡತಕ್ಕದ್ದು.

6. ದರಖಾಸ್ತು ಮೊಬಲಗು ಶಿವಾಯಿ 4 ಮತ್ತು 5ನೇ ಕಲಂನಲ್ಲಿ ನಮೂದಾಗುವ ಷರತ್ತಿಗೆ ವಳಪಟ್ಟು ಖಜಾನೆಗೆ ಸಲಾಯಿಸುವ ಸದರೀ ಕಂಟ್ರಾಕ್ಟು ಮೊಬಲಗಿನ ರೂಪಾಯಿ ವಂದಕ್ಕೆ ವಂದಾಣಿಯಂತೆ ಲೋಕಲ್ ಸೆಸ್ ಕೊಡಲಿಕ್ಕೆ ಕಂಟ್ರಾಕ್ಟುದಾರನು ಬದ್ಧನಾಗಿ ಯಿರುತ್ತಾನೆ.

7. ಪ್ರತಿದಿನದ ಟೋಲ್ ವಸೂಲ್ ತೋರಿಸುವ ನಿಜವಾದ ಮತ್ತು ಖರಾರ್‌ವಾಕಾವಾದ ಲೆಕ್ಕವನ್ನ ಇಡಲು ಸಹಾ ಕಂಟ್ರಾಕ್ಟುದಾರನು ಬದ್ಧನಾಗಿ ಯಿರುವದಲ್ಲದೆ ಸಬ್ ಡಿವೀರ್ಜ ಮತ್ತು ತಾಲ್ಲೂಕು ವುದ್ಯೋಗಸ್ಥರ ಇನ್‌ಸ್ಪೆಕ್ಷಗೆ ಲೆಕ್ಕ ವಳಗಾಗಿ ಯಿರತಕ್ಕದ್ದು.

8. ಗವರ್ನಮೆಂಟ್ ಟೋಲ್ ಮನೆ ಮತ್ತು ಗೇಟನ್ನು ಕಂಟ್ರಾಕ್ಟುದಾರ ವುಪಯೋಗಿಸತಕ್ಕದ್ದು. ಮತ್ತು ಅವುಗಳನ್ನ ಆತನು ಪೂರಾ ದುರಸ್ತಿನಲ್ಲಿ ಯಿಟ್ಟುಕೊಂಡಿರತಕ್ಕದ್ದು.

9. ಕಂಟ್ರಾಕ್ಟುದಾರನು ಪ್ರತಿ ತಿಂಗಳ ಗುರ್ತೇ ತಾರೀಖಿನಲ್ಲಿ ಹಿಂದಣ ತಿಂಗಳ ಟೋಲ್ ವಸೂಲಿ ಲೆಕ್ಕವನ್ನು ಮಂಜಿರಾಬಾದ್ ತಾಲ್ಲೂಕು ಕಚೇರಿಗೆ ಕಳುಹಿಸತಕ್ಕದ್ದು.

ದರಗಳ ಪಟ್ಟಿ.

ಸ್ ೧೮೮೨ನೇ ಇಸವಿ ಮಾರ್ಚೀ 18ನೇ ಮತ್ತು ಂ ಮೈಸೂರು ಗೆಜೆಟ್ಟಿನಲ್ಲಿ ನಮೂದಾಗಿ ಯಿರುತ್ತೆ.

ಟಿ. ಆನಂದರಾವ್,
ಸಬ್ ಡಿವೀರ್ಜ ಆಫೀಸರ್.

ಕಡೂರು ಡಿಸ್ಟ್ರಿಕ್ಟು ಸಬಾರ್ಡಿನೇಟ್ ಜಡ್ಜ್ರೀಯೆಹರ ಕೋರ್ಟಿನಿಂದ.

1884ನೇ ಇಸವಿ ಮಿಸಲೇನಿಯಸ್ ಕೇಸ್ ನಂಬರ್ 15.

ಮೃತಪಟ್ಟ ಬೇಲೂರ ತಾಲ್ಲೂಕು ಅರೇಹಳ್ಳಿ ಮಾಗಣಿ ವಿದ್ದರಹಳ್ಳಿ ಪೇಟೆ ನಿರ್ವಾಣ ಶಟ್ಟಯ ಆಸ್ತಿ ವಿಷಯದಲ್ಲಿ—

ಅರ್ಜೀದಾರ ರುದ್ರಶಟ್ಟಯ, ಮೃತಪಟ್ಟ ನಿರ್ವಾಣಶಟ್ಟಯ ತಮ್ಮ ಆಗಬೇಕೆಂಬ ಹಕ್ಕುದಾರಿ ಮೇಲೆ ವಿದ್ದರಹಳ್ಳಿ ಪೇಟೇಲಿರುವ ರುದ್ರಶಟ್ಟಯು ವಿದ್ದರಹಳ್ಳಿ ಪೇಟೆ ವಾಸಸ್ತನಾಗಿ ಮೃತಪಟ್ಟ ನಿರ್ವಾಣ ಶಟ್ಟಯ ಜೆಂದಿಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯಗ್ಯೆ ಈ ಕೋರ್ಟಿಗೆ ಫಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ರುದ್ರಶಟ್ಟಯ ಅರ್ಜಿಯದ್ದು ಸ್ ೧೮೮೪ನೇ ಇಸವಿ ಮಾರ್ಚೀ 27ರಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಿರ್ವಾಣಶಟ್ಟಿ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1884ನೇ ಇಸವಿ ಫಿಬ್ರುವರೀ 18ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.